ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ
ಸಿ.ಸಿ.55–10

| | | |
|---|---|---|
| ಹೆಸರು | ಮುನಿಶಾಮಪ್ಪ | ಪ್ರಾ.ಸಾ.8 |
| ತಂದೆ ಹೆಸರು | ಮುನಿಯಪ್ಪ | ಚಾ.ಸಾ.13 |
| ವಯಸ್ಸು | 34 ವರ್ಷ | |
| ಕೆಲಸ | ವ್ಯವಸಾಯ | ಸಾ.ಪ್ರ.ವ.ಬೋ |
| ಹಾಲಿ ವಾಸ | ಮುದ್ದನಹಳ್ಳಿ | ದಿನಾಂಕಃ–14–7–2015 |

**ಮುಖ್ಯ ವಿಚಾರಣೆ ಮಾನ್ಯ ಎಪಿಪಿ ರವರಿಂದಃ–**

ದಿ:18–11–2009ರಂದು ನಂದಗುಡಿ ಪೋಲೀಸರು ಮುದ್ದನಹಳ್ಳಿಯಿಂದ ನನ್ನನ್ನು ಕರೆಯಿಸಿಕೊಂಡು ಕೆಎ–07–7364 ಸಂಖ್ಯೆಯ ಆಟೋವನ್ನು ನನ್ನ ಮುಂದೆ ಅಮಾನತ್ತುಪಡಿಸಿಕೊಂಡು ಮಹಜರು ಬರೆದು ಸಹಿ ಪಡೆದರು. ನಾನು ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಅಮಾನತ್ತು ಪಂಚನಾಮೆಯನ್ನು ನಿ.ಪಿ.3 ಎಂದು ಸಾಕ್ಷಿದಾರರ ಸಹಿಯನ್ನು ನಿ.ಪಿ.3(ಬಿ) ಎಂದು ಗುರುತಿಸಲಾಯಿತು.

ಆರೋಪಿ ಗೈರು ಹಾಜರಾಗಿದ್ದು ವಿನಾಯತಿ ಅರ್ಜಿ ಸಲ್ಲಿಸಿರುವ ಆರೋಪಿ ಪರ ಮಾನ್ಯ ವಕೀಲರಿಂದ ಆರೋಪಿಯನ್ನು ಗುರುತಿಸುವ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ.

**ಆರೋಪಿಗಳ ಪರ ವಕೀಲರಿಂದ: ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ಹೊಸಕೋಟೆ .**

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ
ಸಿ.ಸಿ.55-10

| | | |
|---|---|---|
| ಹೆಸರು | ದೇವರಾಜು | ಪ್ರಾ.ಸಾ.7 |
| ತಂದೆ ಹೆಸರು | ಚಿಕ್ಕಚೌಡಪ್ಪ | ಚಾ.ಸಾ.12 |
| ವಯಸ್ಸು | 35 ವರ್ಷ | |
| ಕೆಲಸ | ವ್ಯವಸಾಯ | ಸಾ.ಪ್ರ.ವ.ಬೋ |
| ಹಾಲಿ ವಾಸ | ಮುದ್ದನಹಳ್ಳಿ | ದಿನಾಂಕಃ-14-7-2015 |

**ಮುಖ್ಯ ವಿಚಾರಣೆ ಮಾನ್ಯ ಎಪಿಪಿ ರವರಿಂದಃ-**

ದಿ:18-11-2009ರಂದು ನಂದಗುಡಿ ಪೋಲೀಸರು ಮುದ್ದನಹಳ್ಳಿಯಿಂದ ನನ್ನನ್ನು ಕರೆಯಿಸಿಕೊಂಡು ಕೆಎ-07-7364 ಸಂಖ್ಯೆಯ ಆಟೋವನ್ನು ನನ್ನ ಮುಂದೆ ಅಮಾನತ್ತುಪಡಿಸಿಕೊಂಡು ಮಹಜರು ಬರೆದು ಸಹಿ ಪಡೆದರು. ನಾನು ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಅಮಾನತ್ತು ಪಂಚನಾಮೆಯನ್ನು ನಿ.ಪಿ.3 ಎಂದು ಸಾಕ್ಷಿದಾರರ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು.

ಆರೋಪಿ ಗೈರು ಹಾಜರಾಗಿದ್ದು ವಿನಾಯತಿ ಅರ್ಜಿ ಸಲ್ಲಿಸಿರುವ ಆರೋಪಿ ಪರ ಮಾನ್ಯ ವಕೀಲರಿಂದ ಆರೋಪಿಯನ್ನು ಗುರುತಿಸುವ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ.

**ಆರೋಪಿಗಳ ಪರ ವಕೀಲರಿಂದ: ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ಹೊಸಕೋಟೆ .**

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ

ಸಿ.ಸಿ.55–10

| | | |
|---|---|---|
| ಹೆಸರು | ಜಿ.ನಾರಾಯಣಪ್ಪ | ಪ್ರಾ.ಸಾ.6 |
| ತಂದೆ ಹೆಸರು | ಗುಟ್ಟಪ್ಪ | ಚಾ.ಸಾ.11 |
| ವಯಸ್ಸು | 65 ವರ್ಷ | |
| ಕೆಲಸ | ವ್ಯವಸಾಯ | ಸಾ.ಪ್ರ.ವ.ಬೋ |
| ಹಾಲಿ ವಾಸ | ಹೆಡಕನಹಳ್ಳಿ | ದಿನಾಂಕಃ–14–7–2015 |

**ಮುಖ್ಯ ವಿಚಾರಣೆ ಮಾನ್ಯ ಎಪಿಪಿ ರವರಿಂದಃ–**

ನನ್ನ ಮಗ ಮುನಿಆಂಜಿನಪ್ಪ ಮತ್ತು ನನ್ನ ಅಳಿಯ ಸುರೇಶ ದಿ:16–11–2009ರಂದು ಮದ್ಯಾಹ್ನ 2.00 ಗಂಟೆಯ ಸಮಯದಲ್ಲಿ ನಂದಗುಡಿಯಿಂದ ನಮ್ಮ ಊರು ಹೆಡಕನಹಳ್ಳಿಗೆ ಆಟೋದಲ್ಲಿ ಬರುತ್ತದ್ದರು . ಆಟೋ ಚಾಲಕ ನಂದಗುಡಿಯಿಂದ ಹೊರಟು ವೇಗವಾಗಿ ಬಂದು ವಡ್ಡಹಳ್ಳಿಯ ಗೇಟಿನ ಬಳಿ ಇರುವ ಇಳಿಜಾರಿನಲ್ಲಿ ಆಟೋವನ್ನು ಹಳ್ಳಕ್ಕೆ ಬೋರಲು ಹಾಕಿದ ಎಂಬುದು ನನಗೆ ಗೊತ್ತಾಯಿತು. ನಮ್ಮ ಹುಡುಗರಿಗೂ ಏಟುಗಳಾಗಿದ್ದವು. ನಂತರ ನಾವು ಸ್ಥಳಕ್ಕೆ ಹೋಗಿ ಅವರನ್ನು ಆಂಬುಲೆನ್ಸ ನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಮಾರನೇಯ ದಿನ ನಾನು ಪೋಲೀಸರಿಗೆ ದೂರು ನೀಡಿದೆ. ದಿ: 18–11–2009ರಂದು ಪೋಲೀಸರು , ಆಟೋ ಮುಗುಚಿಕೊಂಡಿದ್ದ ಸ್ಥಳಕ್ಕೆ ಬಂದು ಅಲ್ಲಿದ್ದ ರಕ್ತದ ಕಲೆಗಳನ್ನು ನೋಡಿ ಮಹಜರು ಮಾಡಿ ನನ್ನ ಸಹಿ ಪಡದರು ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯು ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಮಹಜರನ್ನು ಈಗಾಗಲೇ ನಿ.ಪಿ.2 ಎಂದು ಗುರ್ತಿಸಿದ್ದು ,ಸಾಕ್ಷಿದಾರರ ಸಹಿಯನ್ನು ನಿ.ಪಿ.2{ಬಿ} ಎಂದು ಗುರುತಿಸಲಾಯಿತು. ಆರೋಪಿ ಗೈರು ಹಾಜರಾಗಿದ್ದು ವಿನಾಯತಿ ಅರ್ಜಿ ಸಲ್ಲಿಸಿರುವ ಆರೋಪಿ ಪರ ಮಾನ್ಯ ವಕೀಲರಿಂದ ಆರೋಪಿಯನ್ನು ಗುರುತಿಸುವ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ.

**ಆರೋಪಿಗಳ ಪರ ವಕೀಲರಿಂದ: ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**

**ಹೊಸಕೋಟೆ .**

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ
ಸಿ.ಸಿ.55–10

| | | |
|---|---|---|
| ಹೆಸರು | ಸುರೇಶ | ಪ್ರಾ.ಸಾ.5 |
| ತಂದೆ ಹೆಸರು | ಮುನಿರಾಜು | ಚಾ.ಸಾ.9 |
| ವಯಸ್ಸು | 40 ವರ್ಷ | |
| ಕೆಲಸ | ಕಂಟ್ರ್ಯಾಕ್ಟರ್ | ಸಾ.ಪ್ರ.ವ.ಬೋ |
| ಹಾಲಿ ವಾಸ | ಹುಲ್ಲಹಳ್ಳಿ , ಆನೇಕಲ್ ತಾಲ್ಲೂಕು | ದಿನಾಂಕಃ–14–7–2015 |

**ಮುಖ್ಯ ವಿಚಾರಣೆ ಮಾನ್ಯ ಎಪಿಪಿ ರವರಿಂದಃ–**

ದಿ:16–11–2009ರಂದು ಮದ್ಯಾಹ್ನ 2.00 ಗಂಟೆಯ ಸಮಯದಲ್ಲಿ ನಂದಗುಡಿಯಿಂದ ನಮ್ಮ ಹೆಂಡತಿಯ ಊರು ಹೆಡಕನಹಳ್ಳಿಗೆ ಆಟೋದಲ್ಲಿ ಹೊರಟೆವು . ಆಟೋದಲ್ಲಿ ನಾನು , ನನ್ನ ಭಾವಮೈದುನ ಮತ್ತು ಇನ್ನು ಸುಮಾರು 6ಜನ ಇದ್ದು ನಾವು ಒಟ್ಟು 9 ಜನ ಪ್ರಯಾಣಿಸುತ್ತಿದ್ದೆವು. ಆಟೋ ಚಾಲಕ ನಂದಗುಡಿಯಿಂದ ಹೊರಟು ವಡ್ಡಹಳ್ಳಿಯ ಗೇಟಿನ ಬಳಿ ಇರುವ ಇಳಿಜಾರಿನಲ್ಲಿ ಆಟೋವನ್ನು ಹಳ್ಳಕ್ಕೆ ಬೋರಲು ಹಾಕಿದ. ಆಟೋ ಚಾಲಕ ಆಟೋವನ್ನು ಓಡಿಸುತ್ತಾ ಇದ್ದು ಓಡಿಸುತ್ತಿದ್ದಂತೆ ಆಟೋವನ್ನು ಅಪ್‌ಸೆಟ್ ಮಾಡಿದ. ಕೂಡಲೇ ನಾನು ಕೆಳಕ್ಕೆ ಬಿದ್ದೆ ಉಳಿದವರೆಲ್ಲರೂ ನನ್ನ ಮೇಲೆ ಬಿದ್ದರು . ಅಪಘಾತದಲ್ಲಿ ನನ್ನ ಬಲಗಾಲಿನ ಮೂಳೆ ಮುರಿದು ಏಟಾಯಿತು. ನನ್ನ ಪಕ್ಕೆಲುಬಿಗೆ ಏಟಾಯಿತು. ನನಗೆ ಜ್ಞಾನ ತಪ್ಪಿ ಹೋಯಿತು. ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಜ್ಞಾನ ಬಂದಾಗ ಆಸ್ಪತ್ರೆಯಲ್ಲಿದ್ದೆ. ಆಟೋವನ್ನು ಮತ್ತು ಆಟೋಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರಾಗಿದ್ದು ವಿನಾಯತಿ ಅರ್ಜಿ ಸಲ್ಲಿಸಿರುವ ಆರೋಪಿ ಪರ ಮಾನ್ಯ ವಕೀಲರಿಂದ ಆರೋಪಿಯನ್ನು ಗುರುತಿಸುವ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ. ಅಪಘಾತದ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ.

**ಆರೋಪಿಗಳ ಪರ ವಕೀಲರಿಂದ: ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ಹೊಸಕೋಟೆ .**

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ

ಸಿ.ಸಿ.55–10

| | | |
|---|---|---|
| ಹೆಸರು | ಮುನಿಆಂಜಿನಪ್ಪ | ಪ್ರಾ.ಸಾ.4 |
| ತಂದೆ ಹೆಸರು | ಜಿ.ನಾರಾಯಣಪ್ಪ | ಚಾ.ಸಾ.8 |
| ವಯಸ್ಸು | 33 ವರ್ಷ | |
| ಕೆಲಸ | ವ್ಯವಸಾಯ | ಸಾ.ಪ್ರ.ವ.ಬೋ |
| ಹಾಲಿ ವಾಸ | ಹೆಡಕನಹಳ್ಳಿ | ದಿನಾಂಕಃ–14–7–2015 |

**ಮುಖ್ಯ ವಿಚಾರಣೆ ಮಾನ್ಯ ಎಪಿಪಿ ರವರಿಂದಃ–**

ದಿ:16–11–2009ರಂದು ಮದ್ಯಾಹ್ನ 2.00 ಗಂಟೆಯ ಸಮಯದಲ್ಲಿ ನಂದಗುಡಿಯಿಂದ ನಮ್ಮ ಊರಿಗೆ ಹಿಂತಿರುಗಲು ಆಟೋದಲ್ಲಿ ಬರುತ್ತಿದ್ದೆವು . ಆಟೋದಲ್ಲಿ ನಾನು , ನಮ್ಮ ಮಾವ ಸುರೇಶ , ನಮ್ಮ ಊರಿನ ಜನರು ಒಟ್ಟು ಸುಮಾರು 8ಜನ ಪ್ರಯಾಣಿಸುತ್ತಿದ್ದೆವು. ಆಟೋ ಚಾಲಕ ಸ್ಪೀಡಾಗಿ ಬಂದು ವಡ್ಡಹಳ್ಳಿಯ ಗೇಟಿನ ಬಳಿ ಇರುವ ಇಳಿಜಾರಿನಲ್ಲಿ ಆಟೋವನ್ನು ಹಳ್ಳಕ್ಕೆ ಬೋರಲು ಹಾಕಿದ ಅಪಘಾತದಲ್ಲಿ ನನ್ನ ಎಡಭುಜ , ಕತ್ತು ಮತ್ತು ಪಕ್ಕೆಲುಬಿಗೆ ಏಟಾಯಿತು. ನಮ್ಮ ಮಾವನ ಕಾಲು ಮತ್ತು ಕುತ್ತಿಗೆಗೆ ಏಟಾಯಿತು. ಆಟೋದಲ್ಲಿದ್ದ ಬೇರೆ ಪ್ರಯಾಣಿಕರಿಗೂ ಗಾಯಗಳಾದವು. ನಮ್ಮ ಊರಿನ ಕವಿತ ಎಂಬುವವರು ಆಟೋದಲ್ಲಿದ್ದು ಅವರ ಹಣೆಗೆ ಏಟಾಯಿತು. ನಂತರ ಯಾರೋ ಸ್ಥಳಕ್ಕೆ ಆಂಬುಲೆನ್ಸ್ ಅನ್ನು ಕರೆಯಿಸಿದ್ದು ಆಂಬುಲೆನ್ಸ ನಲ್ಲಿ ನಮ್ಮನ್ನು ಆಸ್ಪತ್ರೆಗೆ ಕರೆದೊಯ್ದರು. ಆಟೋದಲ್ಲಿದ್ದ ರಾಜಪ್ಪ ಎಂಬುವವರಿಗೆ ತೀವ್ರ ಗಾಯಗಳಾಗಿ ಮೃತಪಟ್ಟರು ಎಂಬುದು ನಮಗೆ ತಿಳಿಯಿತು. ಆಟೋ ಚಾಲಕ ವಾಹನವನ್ನು ವೇಗವಾಗಿ ಓಡಿಸುತ್ತಿದ್ದ. ಆಟೋವನ್ನು ಮತ್ತು ಆಟೋಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರಾಗಿದ್ದು ವಿನಾಯತಿ ಅರ್ಜಿ ಸಲ್ಲಿಸಿರುವ ಆರೋಪಿ ಪರ ಮಾನ್ಯ ವಕೀಲರಿಂದ ಆರೋಪಿಯನ್ನು ಗುರುತಿಸುವ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ. ಅಪಘಾತದ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ.

**ಆರೋಪಿಗಳ ಪರ ವಕೀಲರಿಂದ: ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ಹೊಸಕೋಟೆ .**

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ
ಸಿ.ಸಿ.55–10

| | | |
|---|---|---|
| ಹೆಸರು | ಚಿಕ್ಕಚೌಡಪ್ಪ | ಪ್ರಾ.ಸಾ.2 |
| ತಂದೆ ಹೆಸರು | ನಾರಾಯಣಪ್ಪ | ಚಾ.ಸಾ.2 |
| ವಯಸ್ಸು | 60 ವರ್ಷ | |
| ಕೆಲಸ | ವ್ಯವಸಾಯ | ಸಾ.ಪ್ರ.ವ.ಬೋ |
| ಹಾಲಿ ವಾಸ | ಮುದ್ದನಹಳ್ಳಿ | ದಿನಾಂಕಃ–14–7–2015 |

**ಮುಖ್ಯ ವಿಚಾರಣೆ ಮಾನ್ಯ ಎಪಿಪಿ ರವರಿಂದಃ–**

ಸುಮಾರು 6 ವರ್ಷಗಳ ಹಿಂದೆ ಮದ್ಯಾಹ್ನ 12.00 ಗಂಟೆಯ ನಂತರ ಆಟೋದಲ್ಲಿ ನಮ್ಮ ಊರು ಮುದ್ದನಹಳ್ಳಿಗೆ ಬರುತ್ತಿದ್ದೆವು . ಆಗ ವಡ್ಡಹಳ್ಳಿಯ ಕ್ರಾಸ್‌ನ ಬಳಿ ಅಟೋ ಚಾಲಕ ಆಟೋವನ್ನು ಚರಂಡಿಗೆ ಬೀಳಿಸಿದ ಆಟೋ ಚಾಲಕ ಆಟೋವನ್ನು ಸ್ಪೀಡಾಗಿ ಓಡಿಸಿಕೊಂಡು ಬಂದು ಡೌನ್ ನಲ್ಲಿ ಆಟೋವನ್ನು ಚರಂಡಿಗೆ ಬೀಳಿಸಿದ . ಅಪಘಾತದಲ್ಲಿ ನನ್ನ ಬೆನ್ನಿನ ಮೂಳೆ ಮುರಿದು ಹೋಯಿತು. ನನ್ನನ್ನು ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಪಘಾತದಲ್ಲಿ ನನ್ನ ಬೆನ್ನಿನ ಮೂಳೆ ಮುರಿದು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ಕಾರಣ ಉಳಿದವರಿಗೆ ಏನು ಏಟುಗಳಾಯಿತು ಎಂಬುದು ನನಗೆ ಗೊತ್ತಿಲ್ಲ. ಆಟೋ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಆ ದಿನ ಆಟೋದಲ್ಲಿ ನಾವು ಸುಮಾರು 8 ಜನ ಪ್ರಯಾಣಿಸುತ್ತಿದ್ದೆವು. ಆರೋಪಿ ಗೈರು ಹಾಜರಾಗಿದ್ದು ವಿನಾಯತಿ ಅರ್ಜಿ ಸಲ್ಲಿಸಿರುವ ಆರೋಪಿ ಪರ ಮಾನ್ಯ ವಕೀಲರಿಂದ ಆರೋಪಿಯನ್ನು ಗುರುತಿಸುವ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ. ಅಪಘಾತದ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ.

**ಆರೋಪಿಗಳ ಪರ ವಕೀಲರಿಂದ: ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)
ಓ.ಹೇ.ಕೇ.ಸ.ಇದೆ

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ಹೊಸಕೋಟೆ .**

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ
ಸಿ.ಸಿ.55–10

| | | |
|---|---|---|
| ಹೆಸರು | ರಾಮಾಂಜಿನಪ್ಪ | ಪ್ರಾ.ಸಾ.3 |
| ಗಂಡೆ ಹೆಸರು | ಹನುಮಪ್ಪ | ಚಾ.ಸಾ.4 |
| ವಯಸ್ಸು | 65 ವರ್ಷ | |
| ಕೆಲಸ | ವ್ಯವಸಾಯ | ಸಾ.ಪ್ರ.ವ.ಬೋ |
| ಹಾಲಿ ವಾಸ | ಗುಂಡ್ರಹಳ್ಳಿ | ದಿನಾಂಕಃ–14–7–2015 |

**<u>ಮುಖ್ಯ ವಿಚಾರಣೆ ಮಾನ್ಯ ಎಪಿಪಿ ರವರಿಂದಃ–</u>**

ಸುಮಾರು 6 ವರ್ಷಗಳ ಹಿಂದೆ ಮದ್ಯಾಹ್ನ 1.00–2.00 ಗಂಟೆಯ ಸಮಯದಲ್ಲಿ ನಂದಗುಡಿ ಆಸ್ಪತ್ರೆಗೆ ಹೋಗಿ ನಮ್ಮ ಊರಿಗೆ ಹಿಂತಿರುಗಲು ಆಟೋದಲ್ಲಿ ಬರುತ್ತಿದ್ದೆವು . ಆಟೋದಲ್ಲಿ ನನ್ನ ಹೆಂಡತಿ ಇದ್ದು ನಾವು ಒಟ್ಟು 9 ಜನ ಪ್ರಯಾಣಿಸುತ್ತಿದ್ದೆವು. ಆಟೋ ಚಾಲಕ ವಡ್ಡಹಳ್ಳಿಯ ಕ್ರಾಸ್‌ನ ಬಳಿ ಆಟೋವನ್ನು ಚರಂಡಿಗೆ ಬೀಳಿಸಿದ . ಆಟೋ ಚಾಲಕ ಆಟೋವನ್ನು ಸ್ಪೀಡಾಗಿ ಓಡಿಸಿಕೊಂಡು ಬಂದು ಆಟೋವನ್ನು ಅಪ್ ಸೆಟ್ ಮಾಡಿದ . ಅಪಘಾತದಲ್ಲಿ ನನ್ನ ಮೊಣಕಾಲಿನ ಮೂಳೆ ಮುರಿದು ಹೋಯಿತು. ನನ್ನ ಹೆಂಡತಿಯ ಭುಜಕ್ಕೆ ಗಾಯಗಳಾದವು. ಉಳಿದವರಿಗೂ ಅಪಘಾತದಲ್ಲಿ ಗಾಯಗಳಾದವು ನಂತರ ನನ್ನನ್ನು ಮತ್ತು ನನ್ನ ಹೆಂಡತಿಯನ್ನು ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆಟೋ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಆ ದಿನ ಆಟೋದಲ್ಲಿ ನಾವು ಸುಮಾರು 9 ಜನ ಪ್ರಯಾಣಿಸುತ್ತಿದ್ದೆವು. ಆರೋಪಿ ಗೈರು ಹಾಜರಾಗಿದ್ದು ವಿನಾಯತಿ ಅರ್ಜಿ ಸಲ್ಲಿಸಿರುವ ಆರೋಪಿ ಪರ ಮಾನ್ಯ ವಕೀಲರಿಂದ ಆರೋಪಿಯನ್ನು ಗುರುತಿಸುವ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ. ಅಪಘಾತದ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ.

**ಆರೋಪಿಗಳ ಪರ ವಕೀಲರಿಂದ: ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ಹೊಸಕೋಟೆ .**